# ಮಹಿಳೆಯರನ್ನು ಕಾಡುವ ಗರ್ಭಕೊರಳು, ಸ್ತನ ಕ್ಯಾನ್ಸರ್

ಡಾ. ಶಾಂತಲಾ
ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞೆ, ಬೆಂಗಳೂರು



**● ಮಹಿಳೆಯರಲ್ಲಿ ಮಾತ್ರವೇ ಕಾಣಿಸಿಕೊಳ್ಳುವ ಕ್ಯಾನ್ಸರ್‌ಗಳಲ್ಲಿ ಯಾವುದು ಪ್ರಮುಖವಾದವು?**

ಮಹಿಳೆಯರಲ್ಲಿ ಮುಖ್ಯವಾಗಿ ಗರ್ಭಕೊರಳಿನ (ಸರ್ವೈಕಲ್) ಕ್ಯಾನ್ಸರ್, ಎಂಡೊಮೆಟ್ರಿಯಲ್ ಕ್ಯಾನ್ಸರ್, ಒವೇರಿಯನ್ ಕ್ಯಾನ್ಸರ್ ಹಾಗೂ ಸ್ತನ ಕ್ಯಾನ್ಸರ್ ಮುಖ್ಯವಾಗಿ ಕಾಣಿಸಿಕೊಳ್ಳುತ್ತವೆ. ಸ್ತನ ಕ್ಯಾನ್ಸರ್ ಹೊರತುಪಡಿಸಿ ಉಳಿದ ಮೂರು ಕ್ಯಾನ್ಸರ್‌ಗಳ ಲಕ್ಷಣ, ರೋಗವಿಧಾನ ಪತ್ತೆ, ಚಿಕಿತ್ಸೆ ಎಲ್ಲವೂ ಬೇರೆ ಬೇರೆ. ಇವುಗಳಲ್ಲಿ ಸರ್ವೈಕಲ್ ಕ್ಯಾನ್ಸರ್ ಹೆಚ್ಚಾಗಿ ಕಂಡುಬರುವಂಥದ್ದು. ಹ್ಯೂಮನ್ ಪ್ಯಾಪಿಲೋಮಾ ವೈರಸ್ (HPV) ಗರ್ಭಕೊರಳಿನ ಕ್ಯಾನ್ಸರ್‌ಗೆ ಮೂಲ ಕಾರಣ.

**● ಸರ್ವೈಕಲ್ ಕ್ಯಾನ್ಸರ್ ಲಕ್ಷಣಗಳೇನು?**

ಬಿಳಿಸ್ರಾವ, ರಕ್ತಸ್ರಾವ, ಸಂಭೋಗದ ಬಳಿಕ ಬ್ಲೀಡಿಂಗ್, ನೋವು, ವಾಸನೆ ಸ್ರಾವ ಎಲ್ಲವೂ ಇದರ ಲಕ್ಷಣಗಳೇ. ಈ ಲಕ್ಷಣಗಳು ಮಹಿಳೆಗೆ ಕಂಡುಬರುವ ಮೊದಲೇ ಹೆಚ್ಚಿನವರಲ್ಲಿ ಸರ್ವೈಕಲ್ ಕ್ಯಾನ್ಸರ್ ಉಲ್ಬಣಗೊಂಡಿರುವ ಹಂತ ತಲುಪಿರುತ್ತದೆ. ಇದೊಂದು ರೀತಿಯಲ್ಲಿ ಸೈಲೆಂಟ್ ಕಿಲ್ಲರ್!

**● ಇದರ ಪತ್ತೆ ಹೇಗೆ?**

ಗರ್ಭಕೋಶ ಪರೀಕ್ಷೆ ಮಾಡಿಸಿದಾಗ ಗರ್ಭಕೊರಳಿನಲ್ಲಿ ಹುಣ್ಣು ಇರುತ್ತದೆ. ಇದು ಅಲರ್ಜಿ, ಅಲ್ಸರ್ ಕೂಡ ಆಗಿರಬಹುದು. ಸೋಂಕಿನಿಂದಲೂ ಆಗಿರಬಹುದು, ಹಾರ್ಮೋನ್ ವ್ಯತ್ಯಾಸದಿಂದಲೂ ಆಗಿರಬಹುದು. ಇವೆಲ್ಲವೂ ಕ್ಯಾನ್ಸರ್ ಅಲ್ಲ. ಮುಖ್ಯವಾಗಿ ಈ ಕ್ಯಾನ್ಸರ್ ಅನ್ನು 'ಸರ್ವೈಕಲ್ ಸೈಟಾಲಜಿ' ಮೂಲಕ ಪತ್ತೆ ಹಚ್ಚಬಹುದು. ಜೊತೆಗೆ ಪಾಪ್‌ಸ್ಮಿಯರ್ ಟೆಸ್ಟ್ ಹಾಗೂ ಲಿಕ್ವಿಡ್ ಬೇಸ್ ಸೈಟಾಲಜಿ ಮೂಲಕವೂ ಪತ್ತೆ ಸಾಧ್ಯ. ಹೆಚ್‌ಪಿವಿ ವ್ಯಾಕ್ಸಿನೇಷನ್ ಹಾಕಿಸಿಕೊಳ್ಳಬೇಕು. ಶಸ್ತ್ರಚಿಕಿತ್ಸೆ ಮೂಲಕವೂ ಪರಿಹಾರ ಕಂಡುಕೊಳ್ಳಬಹುದು.

ಇದೀಗ ಕಾಲ್ಪೋಸ್ಕೋಪ್ ಎಂಬ ಚಿಕಿತ್ಸಾ ವಿಧಾನ ಬಂದಿದೆ. ಗರ್ಭಕೊರಳಿನಲ್ಲಿನ ಹುಣ್ಣನ್ನು ಅಧ್ಯಯನ ಮಾಡಿ ಅಲ್ಸರ್‌ನ ತೀವ್ರತೆಯನ್ನು ಕಂಡುಹಿಡಿಯುವ ಇದು ಹೆಚ್ಚು ಪರಿಣಾಮಕಾರಿ ಚಿಕಿತ್ಸೆಯೂ ಹೌದು.

**● ಸ್ತನ ಕ್ಯಾನ್ಸರ್ ಪ್ರಕರಣಗಳು ಹೆಚ್ಚುತ್ತಿವೆ ಅಲ್ಲವೇ?**

ಭಾರತೀಯ ಮಹಿಳೆಯರಲ್ಲಿ ಕಂಡುಬರುವ ಕ್ಯಾನ್ಸರ್‌ಗಳಲ್ಲಿ ಸ್ತನ ಕ್ಯಾನ್ಸರ್ ಪ್ರಮುಖವಾದದ್ದು. ಕ್ಯಾನ್ಸರ್ ಪೀಡಿತರಲ್ಲಿ ಶೇ. 28ರಷ್ಟು ಮಂದಿ ಸ್ತನ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ ಎನ್ನಲಾಗಿದೆ. ಜೀವನಶೈಲಿ ಬದಲಾವಣೆ, ವಂಶವಾಹಿ ಕಾರಣಗಳಿಂದಲೇ ಸ್ತನ ಕ್ಯಾನ್ಸರ್ ಪತ್ತೆಯಾಗುತ್ತಿದೆ. ಹದಿಹರೆಯದ ಹುಡುಗಿಯಿಂದ ಮೆನೊಪಾಸ್ ಆದ ಮಹಿಳೆಯರಲ್ಲೂ ಕಂಡುಬರಬಹುದು.

ಅತಿತೂಕ, ಮದ್ಯಸೇವನೆ, ಹಾರ್ಮೋನ್‌ಗಳ ಏರುಪೇರು, ಗರ್ಭನಿರೋಧಕ ಮಾತ್ರೆಗಳ ಅತಿ ಬಳಕೆ, ವಿಕಿರಣಕ್ಕೆ ಮೈಒಡ್ಡುವುದು, ಅತಿಯಾದ ಆ್ಯಂಟಿಬಯಾಟಿಕ್ ಸೇವನೆ, ಮಾನಸಿಕ ಒತ್ತಡ, ಇತ್ಯಾದಿಗಳನ್ನು ಪಟ್ಟಿ ಮಾಡಬಹುದು. ಜೊತೆಗೆ ಹೆಚ್ಚು ಜನರ ಜೊತೆ ಲೈಂಗಿಕ ಸಂಪರ್ಕ, ಮಗುವಿಗೆ ಎದೆಹಾಲುಣಿಸದೇ ಇರುವ ಮಹಿಳೆಯರಲ್ಲಿ, ಆನುವಂಶೀಯತೆಯೂ ಸ್ತನ ಕ್ಯಾನ್ಸರ್‌ಗೆ ಕಾರಣವಾಗಬಲ್ಲವು.

**● ಪರೀಕ್ಷೆ, ಚಿಕಿತ್ಸೆಗಳೇನು?**

ಮೊದಲ ಚಿಕಿತ್ಸೆ ಎಂದರೆ 'ಸೆಲ್ಫ್ ಬ್ರೆಸ್ಟ್ ಎಕ್ಸಾಮಿನೇಷನ್' (ಸ್ತನವನ್ನು ಮಹಿಳೆಯೇ ಮುಟ್ಟಿ ಗಂಟುಗಳಿವೆಯೇ, ಏನಾದರು ವ್ಯತ್ಯಾಸಗಳಿವೆಯೇ ಎಂಬುದನ್ನು ಪತ್ತೆ ಹಚ್ಚುವುದು). ಮುಟ್ಟು ಆದ ಮೇಲೆ ನಾಲ್ಕು ದಿನದ ಬಳಿಕ ಈ ಟೆಸ್ಟ್ ಮಾಡಿಕೊಳ್ಳಬೇಕು. ಅಲ್ಟ್ರಾ ಸೌಂಡ್, ಮ್ಯಾಮೊಗ್ರಾಮ್, ಎಕ್ಸರೇ ಮಾಡಿಸಬೇಕು. ಅನೇಕ ಮಹಿಳೆಯರು ಸ್ತನ ಕ್ಯಾನ್ಸರ್‌ನಿಂದ ಬಳಲುತ್ತಿದ್ದು, ಸ್ತನವನ್ನೇ ತೆಗೆದುಹಾಕುವಂಥ ಶಸ್ತ್ರಚಿಕಿತ್ಸೆಗೂ ಒಳಗಾಗಿದ್ದಾರೆ. ಮುಂಜಾಗ್ರತೆಯೇ ಇದಕ್ಕೆ ಮೂಲಮದ್ದು. ■

ಲಂಗ್ಸ್ ಕ್ಯಾನ್ಸರ್ ಎಂದೇ ಜನಪ್ರಿಯ. ಹಿಂದೆಲ್ಲ ಐವತ್ತು ವರ್ಷ ದಾಟಿದವರಲ್ಲಿ ಕಾಣಿಸಿಕೊಳ್ಳುತ್ತಿದ್ದ ಈ ರೋಗ, ಇದೀಗ ಹದಿಹರೆಯದವರಲ್ಲೂ ಕಾಣಿಸಿಕೊಳ್ಳುತ್ತಿರುವುದು ಆತಂಕದ ವಿಚಾರ. ಇದಕ್ಕೆ ಪ್ರಮುಖ ಕಾರಣ ಬದಲಾದ ಜೀವನಶೈಲಿ ಹಾಗೂ ಧೂಮಪಾನ. ಈ ರೀತಿಯ ಕ್ಯಾನ್ಸರ್‌ನ ಅಪಾಯವೆಂದರೆ ಇದು ಪ್ರಾರಂಭಿಕ ಹಂತದಲ್ಲಿ ಯಾವುದೇ ಲಕ್ಷಣಗಳನ್ನು ತೋರಿಸುವುದಿಲ್ಲ. ಮೂರನೇ ಅಥವಾ ನಾಲ್ಕನೇ ಹಂತ ತಲುಪಿದ ಬಳಿಕವಷ್ಟೇ ಇದರ ತೀವ್ರತೆ ತಿಳಿಯುವುದು. ಆದರೆ ನಿರಂತರ ಕೆಮ್ಮು, ಜೊತೆಗೆ ಆಯಾಸವಿದ್ದರೆ ವೈದ್ಯರನ್ನು ಕಾಣಬೇಕು. ಮುಂದಿನ ಹಂತದಲ್ಲಿ ಕೆಮ್ಮುವಾಗ ರಕ್ತ ಬರುವುದು, ಕಫದಲ್ಲಿ ರಕ್ತ ಸೇರಿರುವ ಲಕ್ಷಣ, ತೂಕ ಕಡಿಮೆಯಾಗುವುದು, ಹಸಿವಾಗದೇ ಇರುವುದು ಮುಂತಾದ ಲಕ್ಷಣಗಳು ಕಂಡುಬರುತ್ತವೆ. ಎದೆಗೂಡಿನಲ್ಲಿ ನೋವು ಬರುವುದು. ಅಂತಿಮ ಹಂತದಲ್ಲಿ ಇದು ದೇಹದ ಇತರ ಭಾಗಗಳಿಗೂ ಹರಡುವ ಅಪಾಯವೂ ಇದೆ.

ಧೂಮಪಾನ ಕ್ಯಾನ್ಸರ್‌ನ ಪ್ರಮುಖ ಕಾರಣಗಳಲ್ಲೊಂದು. ಈಗೀಗ ಹದಿಹರೆಯದವರು ಕೂಡ ಧೂಮಪಾನಿಗಳಾಗುತ್ತಿರುವುದು ಹೆಚ್ಚುತ್ತಿರುವುದರಿಂದ ಎದೆಗೂಡಿನ ಕ್ಯಾನ್ಸರ್ ರೋಗಿಗಳು ಹೆಚ್ಚುತ್ತಿದ್ದಾರೆ ಎನ್ನುವುದು ವೈದ್ಯಲೋಕದ ಕಳವಳ.

## ಬಾಯಿ ಕ್ಯಾನ್ಸರ್

ಬಾಯಿಯಲ್ಲಿ ದೀರ್ಘಕಾಲಿಕ ಬಿಳಿ ಮತ್ತು ಕೆಂಪುಕಲೆಗಳು ಕಾಣಿಸಿಕೊಂಡರೆ ಅದು ಬಾಯಿ ಕ್ಯಾನ್ಸರ್ ಲಕ್ಷಣ ಎಂದು ಶಂಕಿಸಬೇಕು. ಬಾಯಿಯಲ್ಲಿ ಬಿಳಿ ಮಚ್ಚೆ, ಕುತ್ತಿಗೆಯಲ್ಲಿ ನೋವಿಲ್ಲದ ಗಡ್ಡೆ, ಬಾಯಿಯಲ್ಲಿ ಕೆಂಪಾದ

